

ಎಲ್ಲರಿಗೂ ಕೈತುತ್ತು ಕೊಡುತ್ತಿತ್ತು. ನಂತರ ಎರಡು ರಾಗಿಯ ರಾಶಿಗಳಲ್ಲಿ ತುಸು ಎತ್ತರವಾಗಿದ್ದ ಒಂದು ರಾಶಿಯಲ್ಲಿ ರಾಗಿಯನ್ನು ಮೊದಲು ಊರಿನ ಎಲ್ಲರಿಗೂ ಗಿದ್ನದಲ್ಲಿ ಅಳೆದುಕೊಟ್ಟು, ಉಳಿದ ಇನ್ನೊಂದು ರಾಶಿ ರಾಗಿಯನ್ನು ಸಾತೆಮ್ಮನ ಮನೆಗೆ ಸುರಿಯುತ್ತಿದ್ದರು. ಇದೆಲ್ಲವನ್ನೂ ಸಾತೆಮ್ಮನೇ ಮುಂದೆ ನಿಂತು ಭಿನ್ನ-ಭೇದ ಮಾಡದಂತೆ, ಯಾರಿಗೂ ಒಂದು ಇಂಕ್ರದಷ್ಟೂ ಕಡಿಮೆಯಾಗದಂತೆ ಅಳೆದು ಕೊಡಿಸುತ್ತಿತ್ತು. ಊರಿನವರು ರಾಗಿ ಮತ್ತು ಭತ್ತವನ್ನು ಹಳೆ ಸೀರೆ, ಟವಲ್ಲು, ಪಂಚೆಗಳಲ್ಲಿ ಕಟ್ಟಿಕೊಂಡು ಹೋಗುತ್ತಿದ್ದರು. 'ಇನ್ನು ಗುಡಿಹಳ್ಳಿಯ ನಮ್ಮ ಭೂಮಿ ಅಂತಹ ಹೆಣ್ಣನ್ನು ಇನ್ನೆಂದೂ ನೋಡಲಾರದು' ಎಂದು ಹೇಳುತ್ತಾ ಗೋವಿಂದರಾಜು ಕಣ್ಣೀರಿನ ಭಾರ ತಡೆಯಲಾರದೆ ನೆಲಕ್ಕೆ ತಲೆ ತಗ್ಗಿಸಿದರು. ಮಳೆಗಾಲದಲ್ಲಿ ಅವರ ಜಮೀನಿನಿಂದ ಬರುವ ನೀರು ರಸ್ತೆಯುದ್ದಕ್ಕೂ ಹರಿಯುತ್ತಿತ್ತು. ಊರಿಗೆ ಬರುವವರು ಮೊದಲು ಇದೇ ನೀರಿನಲ್ಲಿ ತಮ್ಮ ಕಾಲು ತೇವ ಮಾಡಿಕೊಂಡು ಬರಬೇಕಾಗಿತ್ತು. ಇದರಿಂದಾಗಿ ಬೇರೆ ಊರುಗಳ ಸಣ್ಣತನ, ಅಸೂಯೆ, ದ್ವೇಷ, ಈರ್ಷ್ಯೆಯ ಗುಣಗಳು ಈ ನೀರಿನಲ್ಲಿ ಕರಗಿಹೋಗಿ ಗುಡಿಹಳ್ಳಿ ಮಲಿನವಾಗದೆ ಸ್ವಚ್ಛವಾಗಿ ಉಳಿದಿತ್ತು.

ಸಾತೆಮ್ಮನ ಜಮೀನಿನ ಎಡಬಲದ ಬದುವಿನಲ್ಲಿ ಸಾಲು ಹುಣಸೆ ಮರಗಳು, ಬೃಹದಾಕಾರವಾಗಿ ಹರಡಿಕೊಂಡಿದ್ದ ಮಾವಿನ ಮರಗಳು, ಜಮೀನಿನ ಮಧ್ಯಭಾಗದಲ್ಲಿ ಯಾವ ಬೇಸಿಗೆಗೂ ಬತ್ತದ ಸಿಹಿನೀರಿನ ಬಾವಿ, ಹೊಲದ ಒಂದು ಭಾಗದಲ್ಲಿ ಕಬ್ಬಿನ ಗದ್ದೆ, ಅದರ ಒತ್ತಿಗೆ ಭತ್ತದ ಗದ್ದೆ, ಅದರ ಬೆನ್ನಿಗೆ ಜೋಳದ ಹೊಲ, ರಾಗಿ ಹೊಲ, ಕಡ್ಲೆಕಾಯಿ ಹೊಲ, ಬಾಳೆ ಸಾಲು, ಒಂದು ಮೂಲೆಯಲ್ಲಿ ಕಗ್ಗಾಡಿನಂತೆ ಬೆಳೆದಿದ್ದ ಸೀಗೆಮೆಳೆ ಹೀಗೆ ಅವರ ಜಮೀನು ನಿತ್ಯ ಹರಿದ್ವರ್ಣದ ಕಾಡಿನಂತೆ ಒಂದಲ್ಲ ಒಂದು ಬೆಳೆಯಿಂದ ಸಮೃದ್ಧವಾಗಿರುತ್ತಿತ್ತು. ಜಮೀನಿನ ಅಂಚಿನಲ್ಲಿ ಒಂದು ಬೃಹತ್ ಹೆಂಚಿನ ಮನೆ, ಅದರ ಪಕ್ಕದಲ್ಲಿ ದನಕರುಗಳಿಗಾಗಿ ಕಟ್ಟಿದ್ದ ಅಷ್ಟೇ ದೊಡ್ಡದಾದ ಕೊಟ್ಟಿಗೆ, ಮನೆಯ ಮುಂಭಾಗದಲ್ಲಿ ಮಣ್ಣಿನ ಸ್ವಾರೆ ಎದ್ದು ಕಾಣುತ್ತಿತ್ತು. ಅದು ಯಾವಾಗಲೂ ಮಜ್ಜಿಗೆಯಿಂದ ತುಂಬಿರುತ್ತಿತ್ತು. ಬಂದವರಿಗೆಲ್ಲಾ ಮುಫತ್ತಾಗಿ ಮಜ್ಜಿಗೆ ಕೊಡುವ ಸಂಪ್ರದಾಯ ಈ ಮನೆಯವರಲ್ಲಿತ್ತು. ಇದೊಂದು ಅವಿಭಕ್ತ ಕುಟುಂಬ. ಮನೆಯಲ್ಲಿ ಹತ್ತಾರು ಜನರಿದ್ದರೂ ಇಡೀ ಕುಟುಂಬದ ಒಳ ಮತ್ತು ಹೊರಗಿನ ವ್ಯವಹಾರಗಳನ್ನು ಹಾಗೂ ಹೊಲ-ಗದ್ದೆಗಳ ಉಸ್ತುವಾರಿಯನ್ನು ಸಾತೆಮ್ಮ ನೋಡಿಕೊಳ್ಳುತ್ತಿತ್ತು. ವಾರಕ್ಕೊಂದಾವರ್ತಿ ಸಾತೆಮ್ಮ ಕಮಾನುಬಂಡಿ ಹೊಡೆಸಿಕೊಂಡು ಸಂತೆಗೆ ಹೋಗಿ ಸಾಮಾನು ಸರಂಜಾಮುಗಳೊಂದಿಗೆ ಮರಳುವಾಗ, ದಾರಿಯಲ್ಲಿ ಯಾರಾದರೂ ಶಾಲಾ ಮಕ್ಕಳು ಕಂಡರೆ ಅವರನ್ನೂ ಗಾಡಿಯಲ್ಲಿ ಹತ್ತಿಸಿಕೊಂಡು ಬರುತ್ತಿತ್ತು. ಮನೆ ಇನ್ನೂ ಒಂದೆರಡೆದು ಫರ್ಲಾಂಗ್ ಇದೆ ಎನ್ನುವಾಗಲೇ ಗಾಡಿ ಎತ್ತುಗಳಿಗೆ ಕಟ್ಟಿದ್ದ ಗಂಟೆ ಗುಮ್ರಿಗಳ ಶಬ್ದ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕೈಯಾಳುಗಳಿಗೆ ಕೇಳಿಸುತ್ತಿತ್ತು.

ಸಾತೆಮ್ಮನ ಜಮೀನಿನಲ್ಲಿ ದಿನವೂ ಕನಿಷ್ಠ ಎಂದರೆ ಹದಿನೈದರಿಂದ ಇಪ್ಪತ್ತು ಆಳುಗಳು ಬಂದು ದುಡಿಯುತ್ತಿದ್ದರು. ಹೀಗೆ ದುಡಿಯುವವರೆಲ್ಲ ಬಹುಪಾಲು ಗುಡಿಹಳ್ಳಿಯವರೇ ಆಗಿರುತ್ತಿದ್ದರು. ಕಬ್ಬು ಕಟಾವು ಮಾಡುವಾಗ ಮಾತ್ರ ಪರ ಊರುಗಳಿಂದಲೂ ಜನ ಬರುತ್ತಿದ್ದರು. ಹೀಗೆ ಬಂದವರಿಗೆಲ್ಲಾ ಮಧ್ಯಾಹ್ನದ ಊಟ ಅಲ್ಲೇ ನಡೆಯುತ್ತಿತ್ತು. ಇವರ ಹೊಲಕ್ಕೆ ಬಂದವರು ಯಾರೂ ಹಸಿದು ಹೋಗುತ್ತಿರಲಿಲ್ಲ. ಇದಕ್ಕಾಗಿಯೇ ಅವರ ಮನೆಯ ಮುಂದಿರುವ ಒಲೆ ಯಾವಾಗಲೂ ಉರಿಯುತ್ತಿತ್ತು. ಒಮ್ಮೊಮ್ಮೆ ಊರಿನವರು ಯಾವುದೂ ಕೆಲಸ ಇಲ್ಲದಿದ್ದಾಗ ಸಾತೆಮ್ಮನ ಹೊಲಕ್ಕೆ ಅವರನ್ನು ಕೇಳದೆಯೇ ಬಂದು ಕೆಲಸ ಮಾಡುತ್ತಿದ್ದರು. ಹೀಗೆ ಎಷ್ಟೇ ಜನ ಬಂದರೂ ಅವರನ್ನು ಈ